ತಲೆಗೂದಲು ಎಂಬುದು ನಮ್ಮ ಐಡೆಂಟಿಟಿ. ಅದರಲ್ಲೂ ಮಹಿಳೆಯರು ತಲೆಗೂದಲು ಕಳೆದುಕೊಂಡಾಗ ಬಹಳ ಕಷ್ಟ ಅನುಭವಿಸ್ತಾರೆ. ಹೊರಗೆ ಹೋಗಲು ಮುಜುಗರಪಟ್ಟುಕೊಳ್ಳುವುದು ಸಹಜ. ಇಂಥವರಿಗೆ ಮನೆಯವರ ಸಹಕಾರ, ಮಾನಸಿಕ ಬೆಂಬಲದ ಜೊತೆಗೆ ತಲೆಗೂದಲು ದಾನಿಗಳೂ ಮುಂದೆ ಬರಬೇಕಾಗಿದೆ.''

ಮೀರಾ ಅವರಂತೆ ಕ್ಯಾನ್ಸರ್‌ನಿಂದ ಗೆದ್ದು ಬಂದರೂ ಕೂದಲಿಲ್ಲದೆ ಮುಜುಗರ ಅನುಭವಿಸುವವರಿಗೆ ತಲೆಗೂದಲು ದಾನ ಮಾಡುವ ಅನೇಕರು ನಮ್ಮ ಸಮಾಜದಲ್ಲಿದ್ದಾರೆ. ಇವರಲ್ಲಿ ಸೆಲೆಬ್ರಿಟಿಗಳು, ವಿದ್ಯಾರ್ಥಿನಿಯರು ಸೇರಿದಂತೆ ವಿವಿಧ ವೃತ್ತಿಕ್ಷೇತ್ರಗಳಿಗೆ ಸೇರಿದವರಿದ್ದಾರೆ. ಅವರ ಅನುಭವಗಳು ಅದ್ಭುತ ಮಾನವೀಯ ಲೋಕವೊಂದನ್ನು ನಮ್ಮೆದುರು ತೆರೆದಿಡುವಂತಿವೆ.

### ಹನ್ನೊಂದರ ಬಾಲೆಯ ಕಾಳಜಿ

ಬೆಂಗಳೂರಿನ 16 ವರ್ಷದ ಅಮನಾ ಜೆ. ಕುಮಾರ್ ನೀಳಕೂದಲ ಚೆಲುವೆ. ಚಿಕ್ಕ ವಯಸ್ಸಿನಿಂದಲೇ ಸಾಮಾಜಿಕ ಕಾಳಜಿ ಹೊಂದಿದ್ದ ಅವರಿಗೆ, ಕ್ಯಾನ್ಸರ್ ಬಂದು ಗುಣಮುಖರಾದ ಹೆಣ್ಣುಮಕ್ಕಳು ತಲೆಗೂದಲಿಲ್ಲದೆ ಬೇಸರಪಟ್ಟುಕೊಳ್ಳುವುದನ್ನು ನೋಡಲಾಗದೆ, ಅವರಿಗೆ ಏನಾದರೂ ಮಾಡಿ ಸಹಾಯ ಮಾಡಬೇಕೆಂದು ನಿರ್ಧರಿಸಿದರು. ಆ ಹುಡುಕಾಟದಲ್ಲಿ ಅವರಿಗೆ ಕಂಡದ್ದು 'ಬೆಂಗಳೂರು ಹೇರ್ ಫೌಂಡೇಷನ್' ಎಂಬ ಸಂಸ್ಥೆ, ಕ್ಯಾನ್ಸರ್ ಗುಣಮುಖರಾದವರಿಗೆ ವಿಗ್ ತಯಾರಿಸಲು ಬೇಕಾದಂತಹ ತಲೆಗೂದಲನ್ನು ಸಂಗ್ರಹಿಸುತ್ತಿದೆ ಎಂಬ ಮಾಹಿತಿ. ಅಮನಾ ತಡಮಾಡಲೇ ಇಲ್ಲ. ತನ್ನ ನೀಳಗೂದಲನ್ನು ದಾನ ಮಾಡಿಯೇ ಬಂದಳು. ಆಗ ಈಕೆಯ ವಯಸ್ಸು ಬರೀ ಹನ್ನೊಂದು.

ಸದ್ಯ ಅಮನಾ ಆರ್‌ವಿ ಪಿಯು ಕಾಲೇಜಿನಲ್ಲಿ ಮೊದಲ ವರ್ಷದ ಪಿಯುಸಿ ವಿದ್ಯಾರ್ಥಿನಿ. ನೊಂದವರಿಗೆ ತನ್ನಿಂದಾದ ಕಿಂಚಿತ್ ಸಹಾಯ ಮಾಡಬೇಕೆಂಬ ಈಕೆಯ ಒಳಮನಸ್ಸು ಕಿಮೋಥೆರಪಿ, ರೇಡಿಯೇಷನ್ ಥೆರಪಿಯ ಅಡ್ಡಪರಿಣಾಮದಿಂದ ತಲೆಗೂದಲನ್ನು ಸಂಪೂರ್ಣ ಕಳೆದುಕೊಂಡ ಮಹಿಳೆಯರಿಗೆ ವರವಾಗಿ ಪರಿಣಮಿಸಿದ್ದು, ಅಮನಾಳಿಗೆ ತೃಪ್ತಿ ನೀಡಿದೆ. ತಾಯಿ ಡಾ. ಲತಾ ಟಿ.ಎಸ್. ಅವರ ಪ್ರೋತ್ಸಾಹ, ಬೆಂಬಲವೂ ಅಮನಾಳ ಬೆನ್ನಿಗಿದೆ.

### ಕಾವ್ಯಾ ಶಾಸ್ತ್ರಿಗೆ ಚಿಕ್ಕಪ್ಪನೇ ಪ್ರೇರಣೆ

'ಕ್ಯಾನ್ಸರ್ ರೋಗಿಗಳಿಗಾಗಿ ತಲೆಗೂದಲನ್ನು ದಾನ ಮಾಡಲು ನಿರ್ಧರಿಸಿದೆ. 2021ರಲ್ಲಿ ಕೂದಲನ್ನು ದಾನ ಮಾಡಿದೆ. ಇದಕ್ಕೆ ಪ್ರಮುಖ ಕಾರಣ, ನನ್ನ ಪ್ರೀತಿಯ ಚಿಕ್ಕಪ್ಪ ಕ್ಯಾನ್ಸರ್‌ಗೆ ಬಲಿಯಾದುದು. ಕಿಮೋಥೆರಪಿಗೆ ಒಳಗಾದವರು ಯಾವ ರೀತಿಯ ನೋವಿನಿಂದ ಬಳಲುತ್ತಾರೆ, ಹಿಂಸೆ ಅನುಭವಿಸುತ್ತಾರೆ ಎನ್ನುವುದನ್ನು ನಾನು ತುಂಬಾ ಹತ್ತಿರದಿಂದ ಕಂಡಿದ್ದೇನೆ. ಮಹಿಳೆಯರು ಬದುಕಿನಲ್ಲಿ

**ಕ್ಯಾನ್ಸರ್ ಚಿಕಿತ್ಸೆಯಿಂದ ರೋಗಿ ಗುಣಮುಖನಾದರೂ, ಚಿಕಿತ್ಸೆಯ ಅಡ್ಡಪರಿಣಾಮದ ಫಲವಾಗಿ ತಲೆಗೂದಲು ಬೋಳಾಗುತ್ತದೆ. ಅಂಥವರು ವಿಗ್ ಮೊರೆ ಹೋಗುತ್ತಿದ್ದು, ವಿಗ್ ತಯಾರಿಕೆಗೆ ಅದರಲ್ಲೂ ಹೆಣ್ಣುಮಕ್ಕಳ ವಿಗ್‌ಗೆ ಉದ್ದನೆ ಕೂದಲು ಅತ್ಯಗತ್ಯ. ಆ ಅಗತ್ಯ ಪೂರೈಸುವ ನಿಟ್ಟಿನಲ್ಲಿ ರೂಪುಗೊಂಡಿರುವ ಕೇಶದಾನದ ಪರಿಕಲ್ಪನೆ ಇನ್ನಷ್ಟು ವ್ಯಾಪಕವಾಗಬೇಕಿದೆ.**




ಕೇಶದಾನ ಮಾಡಿದ ಅಮನಾ ಜೆ. ಕುಮಾರ್ ನಂತರದಲ್ಲಿ ಕಂಡಿದ್ದು ಹೀಗೆ...





ಕೇಶದಾನ ಮಾಡಿ ಮಾದರಿ ಎನಿಸಿಕೊಂಡ ಕಿರುತೆರೆ ನಟಿ ಕಾವ್ಯಾ ಶಾಸ್ತ್ರಿ